# ಬೇಸಿಗೆಗೆ ಖಾದಿ ಸೀರೆ

ಬಿಸಿಲು ಹೆಚ್ಚಿದ್ದಾಗ ಖಾದಿ ಸೀರೆ, ಕಾಟನ್ ಸೀರೆಗಳೇ ಮೈಗೆ ಹಿತವೆನಿಸುತ್ತವೆ. ಈಗೀಗ ಫ್ಯಾಷನ್ ಬಯಸುವ ಮಹಿಳೆಯರು, ಹುಡುಗಿಯರು ಖಾದಿ ಸೀರೆಯ ಮೊರೆ ಹೋಗಿದ್ದಾರೆ.

ಜೈಪುರ ಕಾಟನ್ ಸೀರೆ ಬಹಳ ಪ್ರಸಿದ್ಧಿ. ಬೆಂಗಳೂರಿನಲ್ಲಿ ಈ ರೀತಿಯ ಶುದ್ಧ, ಮೆತ್ತನೆಯ ಕಾಟನ್ ಸೀರೆ ಹೆಚ್ಚು ಮಹಿಳೆಯರು ಇಷ್ಟಪಡುತ್ತಿದ್ದಾರೆ. ಇದೇ ರೀತಿ ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಿಂದ ಬಂದ ಉತ್ತಮ ಗುಣಮಟ್ಟದ ಖಾದಿ ಮಹಿಳೆಯರ ಮೆಚ್ಚುಗೆ ಗಳಿಸಿದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಸಿಗುತ್ತವೆ. ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಖಾದಿ, ಡೆನಿಮ್, ಕಾಟನ್ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

ಖಾದಿ ಎಂದರೆ ತಂಪು ತಂಪು, ಕೂಲ್ ಕೂಲ್! ಸೆಕೆಗಾಲಕ್ಕೆ ತಣ್ಣಗಿನ ಭಾವ ನೀಡುವುದು ಖಾದಿ ಬಟ್ಟೆಯ ವಿಶೇಷತೆ. ಸೀರೆ ಮಾತ್ರವಲ್ಲದೆ ಚೂಡಿದಾರ್, ಕುರ್ತಾ, ಜುಬ್ಬಾ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ಬಳಸಲಾಗುತ್ತದೆ. ಒಗೆದಷ್ಟೂ ತೆಳುವಾಗುವ, ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಶ್ರೇಷ್ಠವಾದುದು ಎಂಬುದು ಜನರ ಭಾವನೆ. ಸೌಂದರ್ಯ ಪ್ರಿಯರು ಹಾಗೂ ಫ್ಯಾಷನ್‌ಪ್ರಿಯರಿಗೆ ಖಾದಿ ಉಡುಪು ಆಪ್ಯಾಯಮಾನ. ಇದು ಸಖತ್ ಲುಕ್ ಕೊಡುತ್ತದೆ. ಗಾಢಬಣ್ಣದ ಸೀರೆಗೆ ಕಾಂಟ್ರಾಸ್ಟ್ ಚೋಲಿ ಸಖತ್ ಆಗಿ ಕಾಣುತ್ತದೆ. ಹಾಗೆಯೇ ತಿಳಿಬಣ್ಣದ ಸೀರೆಗಳಿಗೆ ಗಾಢ ಬಣ್ಣದ ರವಿಕೆ ಹೆಚ್ಚು ಹೊಂದಿಕೆಯಾಗುತ್ತದೆ.

ಖಾದಿ ದುಪ್ಪಟ್ಟಾ ಸೌಂದರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ. ಖಾದಿಯ ವಿವಿಧ ವಿಧಗಳಾದ ಫ್ಯಾಬ್ರಿಕ್ ಮಿಶ್ರಿತ ಖಾದಿ, ಶುದ್ಧ ಖಾದಿ ಬಳಸುವವರಿಗೆ ಮೆಚ್ಚುಗೆಯಾಗುತ್ತದೆ. ಬೇಸಿಗೆಗಾಗಿಯೇ ಇರುವ ಖಾದಿ ಉಡುಗೆ ಬರೀ ಮಹಿಳೆಯರಷ್ಟೇ ಅಲ್ಲ, ಪುರುಷರು ಕೂಡ ಖಾದಿ ಪೈಜಾಮ ತೊಟ್ಟು ಸಖತ್ತಾಗಿ ಮಿಂಚುತ್ತಿದ್ದಾರೆ. ಸಣ್ಣ ಹುಡುಗರು, ಯುವಕರು ಖಾದಿ ಪೈಜಾಮ, ಜುಬ್ಬಾ ತೊಟ್ಟರೆ ಸಾಂಪ್ರದಾಯಿಕ ಲುಕ್ ಜತೆಗೆ ಕಳೆಕಳೆಯಾಗಿ ಕಾಣಬಹುದು.

ಮುಂತಾದವು ನೋಡಲೂ ಆಕರ್ಷಕ, ತೊಟ್ಟುಕೊಳ್ಳಲೂ ಆರಾಮದಾಯಕ. ಇದರಲ್ಲೂ ದೊಡ್ಡ ದೊಡ್ಡ ಹೂವಿನ ವಿನ್ಯಾಸ ಹೆಚ್ಚು ಆಕರ್ಷಕವೂ ಆಗಿದೆ. ಹೀಗಾಗಿ ಮಹಿಳೆಯರು, ಮಕ್ಕಳು ಇದೇ ವಿನ್ಯಾಸದ ಉಡುಪುಗಳಿಗೆ ಆದ್ಯತೆ ನೀಡುತ್ತಿದ್ದಾರೆ' ಎಂದು ಹೇಳುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ವಸ್ತ್ರವಿನ್ಯಾಸಕಿ ಸೌಭಾಗ್ಯಲಕ್ಷ್ಮಿ.

ಹೂವಿನ ಚಿತ್ತಾರದ ಫ್ರಾಕ್ ಕೂಡ ಬೇಸಿಗೆಗೆ ಸೂಕ್ತವಾದದ್ದೇ. ಇದಕ್ಕೆ ಡೀಪ್ ನೆಕ್, ಬೀಸು ತೋಳು ಇದ್ದರೆ ಬೇಸಿಗೆಯಲ್ಲಿ ಕಂಫರ್ಟಬಲ್ ಆಗಿರುತ್ತದೆ. ಇಂಥ ಉಡುಗೆ ಕಚೇರಿ, ಪಾರ್ಟಿ, ಶಾಪಿಂಗ್, ಪ್ರಯಾಣ ಮಾಡುವ ಸಂದರ್ಭದಲ್ಲಿ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಕಾಟನ್ ಪ್ಯಾಂಟ್ ಜೊತೆಗೆ ತಿಳಿಬಣ್ಣದ ಟಾಪ್ ಹಾಗೂ ಇದಕ್ಕೊಪ್ಪುವ ಬ್ಲೇಜರ್ ಹಾಕಿಕೊಂಡರೆ ಸಖತ್ ಲುಕ್ ಕೊಡುತ್ತದೆ. ಮಿನಿಸ್ಕರ್ಟ್ ಧರಿಸಿ ಅದರ ಮೇಲೆ ಕಾಟನ್ ಶರ್ಟ್ ಹಾಕಿದರೂ ಬೇಸಿಗೆ ಕಾಲದಲ್ಲಿ ಸ್ಟೈಲಿಷ್ ಆಗಿ ಕಾಣಿಸಿಕೊಳ್ಳಬಹುದು.

'ನಾವು ಧರಿಸುವ ಉಡುಪು ನಮ್ಮ ವ್ಯಕ್ತಿತ್ವವನ್ನು ಎತ್ತಿತೋರಿಸುತ್ತದೆ. ನಮ್ಮ ಅಭಿರುಚಿ, ಆಸಕ್ತಿ, ಜೀವನಶೈಲಿಯನ್ನೂ ನಮ್ಮ ಉಡುಪು ಬಿಂಬಿಸುತ್ತದೆ. ಬೇಸಿಗೆಯಲ್ಲಿ ಭಿನ್ನ ಭಿನ್ನ ಉಡುಪುಗಳನ್ನು ಧರಿಸಿ ನಮ್ಮ ಫ್ಯಾಷನ್ ಅಭಿರುಚಿಯನ್ನು ಅನಾವರಣಗೊಳಿಸಬಹುದು' ಎಂದು ಹೇಳುತ್ತಾರೆ ಈ ವಸ್ತ್ರ ವಿನ್ಯಾಸಕಿ.

**ದೊಗಳೆ ಪ್ಯಾಂಟ್‌ಗಳ ಕಾಲವಯ್ಯಾ...**

ಬೇಸಿಗೆಯ ದಿನಗಳಲ್ಲಿ ಹೆಚ್ಚು ಗಾಳಿಯಾಡುವಂಥ ಉಡುಪುಗಳೇ ಸೂಕ್ತ. ಸ್ಕಿನ್ ಟೈಟ್ ಡ್ರೆಸ್ ಏನಿದ್ದರೂ ಚಳಿ, ಮಳೆಗಾಲಕ್ಕೆ ಹೇಳಿ ಮಾಡಿಸಿದಂಥವು. ಈಗಂತೂ ದೊಗಳೆ ಪ್ಯಾಂಟ್‌ಗಳೇ ಹೆಚ್ಚು ಟ್ರೆಂಡಿಂಗ್‌ನಲ್ಲಿರುವುದು. ಜೊತೆಗೆ ಬ್ಯಾಗಿ ಜೀನ್ಸ್ ಕೂಡ ಮಹಿಳೆಯರಿಗೆ ಇಷ್ಟದ ಉಡುಪೇ ಆಗಿದೆ.



ಸಾಮಾನ್ಯವಾಗಿ ಸಿನಿಮಾ ನಟಿಯರು ಧರಿಸಿದ ಉಡುಪು ಫ್ಯಾಷನ್ ಜಗತ್ತಿನಲ್ಲಿ ಹೊಸ ಸಂಚಲನ ಮೂಡಿಸುತ್ತದೆ. ಹಳೆಯ ಕಾಲದ ಬ್ಯಾಗಿ ಜೀನ್ಸ್ ಪ್ಯಾಂಟ್‌ಗಳ ಕಡೆ ಒಮ್ಮೆ ಹಿಂತಿರುಗಿ ನೋಡಿ.

ಅದು ಅಂದಾಜು 80ರ ದಶಕ. ಆಗ ನಟಿಯರು, ಸೆಲೆಬ್ರಿಟಿಗಳು ಪಾದದ ಬಳಿ ಅಗಲವಾಗಿರುವ ಜೀನ್ಸ್ ಪ್ಯಾಂಟ್ ಧರಿಸುತ್ತಿದ್ದರು. ಇದರ ಮೇಲೆ ಲೂಸ್ ಶರ್ಟ್, ಟೀ ಶರ್ಟ್, ಟಾಪ್‌ಗಳನ್ನೂ ಧರಿಸಿ ಫ್ಯಾಷನ್ ಲೋಕದಲ್ಲಿ ಮಿಂಚುತ್ತಿದ್ದರು. ಅದೇ ಫ್ಯಾಷನ್ ತೊಡುಗೆ ಇದೀಗ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಮಹಿಳೆಯರು ಈಗೀಗ ಬ್ಯಾಗಿ ಪ್ಯಾಂಟ್‌ಗಳತ್ತ ಚಿತ್ತ ಹರಿಸಿದ್ದಾರೆ.

**ಲಾಂಗ್ ಸ್ಕರ್ಟ್**

ಹಿಂದಿನ ಕಾಲದಲ್ಲಿ ಸ್ಕರ್ಟ್ ಅದರಲ್ಲೂ ಲಾಂಗ್‌ಸ್ಕರ್ಟ್ ಹೆಚ್ಚು ಪ್ರಚಲಿತದಲ್ಲಿತ್ತು. ಸಿನಿಮಾಗಳಲ್ಲಿಯೂ ನಟಿಯರು ಧರಿಸುತ್ತಿದ್ದುದು ಸ್ಕರ್ಟ್ ಅನ್ನೇ. ಮಿನಿ ಹಾಗೂ ಲಾಂಗ್ ಈ ಎರಡೂ ಬಗೆಯ ಸ್ಕರ್ಟ್‌ಗಳು ಈಗ ಮತ್ತೆ ಮುನ್ನೆಲೆಗೆ ಬಂದಿವೆ. ಇದರಲ್ಲಿ ಶುದ್ಧ ಹತ್ತಿಯಿಂದ ತಯಾರಿಸಿದ ಸ್ಕರ್ಟ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ.

**ಫುಲ್ ಮ್ಯಾಕ್ಸಿ**

ಈಗೀಗ ಫುಲ್ ಮ್ಯಾಕ್ಸಿ ಹಾಕಿಕೊಳ್ಳುವುದೇ ಯುವತಿಯರಿಗೆ ಸಂಭ್ರಮ. ಬೇಸಿಗೆಗೆ ಹೇಳಿಮಾಡಿಸಿದ ಉಡುಗೆ ಇದು. ತ್ವಚೆಯ ಆರೋಗ್ಯ ಕಾಪಾಡಿಕೊಳ್ಳಲೂ ಇದು ಸಹಕಾರಿ. ಫುಲ್ ಮ್ಯಾಕ್ಸಿಯಲ್ಲಿ ಸೈಡ್ ಸ್ಲಿಟ್ ಇದ್ದರೆ ಫ್ಯಾಷನ್ ಜೊತೆಗೆ ಅಂದವನ್ನೂ ಹೆಚ್ಚಿಸುತ್ತದೆ ಈ ಉಡುಗೆ. ಹೀಗಾಗಿ ಇದಕ್ಕೆ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆ.